30

# (ಕೆಲಸದ) ಒತ್ತಡದ ದಿನ

## ಓದುವ ಮನೆಪಾಠ #11

V. ಎರಡನೇ ಪಸ್ಕದಿಂದ, ಮೂರನೆಯದಕ್ಕೆ (ಮುಂದುವರೆಯುವದು).
  K. ಗಲಿಲಾಯದ ಎರಡನೇ ಪ್ರಯಾಣ (ಲೂಕ 8:1-3).
  L. ದೇವದೂಷಣೆ ಮಾಡಿದನೆಂಬ ಅಪವಾದ (ಮತ್ತಾಯ 12:22-37; ಮಾರ್ಕ 3:20-30; ಲೂಕ 11:14-23).
  M. ಸೂಚನೆಗಳನ್ನು ಹುಡುಕುವವರು (ಮಾತ್ತಾಯ 12:38-45; ಲೂಕ 11:16, 24-26, 29-36).
  N. ಯೇಸುವಿನ ಕುಟುಂಬ (ಮತ್ತಾಯ 12:46-50; ಮಾರ್ಕ 3:31-35; ಲೂಕ 8:19-21; 11:27, 28).

## ಪೀಠಿಕೆ

ಊಟಮಾಡಲೂ ಆಗದಂತ ಒತ್ತಡದಿನವನ್ನು ನೀವು ಎಂದಾದರೂ ಹೊಂದಿದ್ದೀರಾ? ಯೇಸುವಿನ ಜೀವಿತದಲ್ಲಿನ ಅಂಥ ದಿನದ ಬಗೆಗೆ ಈ ಪಾಠವು ಇರುವುದಾಗಿದೆ. ಕ್ರಿಸ್ತನ ಸೇವೆಯ ಕೆಲವೇ ದಿನಗಳ ವಿವರಗಳನ್ನು ಇದು ತಿಳಿಸುವುದಾಗಿದೆ. "ಪ್ರಶ್ನೆಗಳ ದಿನ" ಎಂದು ಕರೆಯುವಂಥಹ ಆತನ ಮರಣದ ಒಂದು ಮಂಗಳವಾರವಾಗಿತ್ತು. ಇನ್ನೊಂದು ಈ ಅಧ್ಯಯನದಲ್ಲಿ ಚಿತ್ರಿಸಲ್ಪಟ್ಟಿದೆ. ಯೋಗ್ಯವಾಗಿ ಇದು "(ಕೆಲಸದ) ಒತ್ತಡದ ದಿನ"[1] ಎಂದು ಕರೆಯಲ್ಪಟ್ಟಿದೆ.

ಈ ದಿನವು ಯೇಸುವಿನ ಗಲಿಲಾಯದ ಎರಡನೆಯ ಪ್ರಯಾಣದಲ್ಲಿ ಕೊನೆಯಾಯಿತು (ಕೊನೆಗೆ ಬಂದ ಹಾದಿ). ಹಿಂದಿನ ಪಾಠದಲ್ಲಿ ಯೇಸು ಕಪೆರ್ನೌಮಿನಿಂದ ನಾಯೀನಿಗೆ ಪ್ರಯಾಣಿಸಿದ್ದನ್ನು (ಲೂಕ 7:1, 11) ಮತ್ತು ನಂತರ ಆ ಸ್ಥಳದಿಂದ ಹೊರಹೋದದ್ದನ್ನು ನೋಡಿದೆವು (ಲೂಕ 7:20, 21, 36, 37). ಲೂಕನು ಅದನ್ನು "ತರುವಾಯ ಆತನು ದೇವರ ರಾಜ್ಯದ ಸುವಾರ್ತೆಯನ್ನು ಸಾರುತ್ತಾ ಊರುಗಳಲ್ಲಿಯೂ ಗ್ರಾಮಗಳಲ್ಲಿಯೂ ಸಂಚರಿಸಿದನು ಆತನ ಸಂಗಡ ಹನ್ನೆರಡು ಮಂದಿ ಶಿಷ್ಯರೂ ಇದ್ದರು" (ಲೂಕ 8:1) ಎಂದು ಹೇಳುತ್ತಾನೆ.[2]

ಗಲಿಲಾಯದ ಮೊದಲ ಪ್ರಾಯಾಣದಲ್ಲಿ, ಕೇವಲ ನಾಲ್ಕು ಜನ ಶಿಷ್ಯರು ಯೇಸುವಿನೊಡನೆ ಪ್ರಯಾಣಿಸಿದ್ದರು.[3] ಈ ಪ್ರಯಾಣದಲ್ಲಿ ಹನ್ನೆರಡು ಜನ ಶಿಷ್ಯರು ತಮ್ಮ ತರಬೇತಿಯ ಭಾಗವಾಗಿ ಇದ್ದಾರೆ. ಯೇಸು ತನ್ನೊಡನೆ ಯಾವಾಗಲೂ ಇರುತ್ತಿದ್ದ ಜನಜಂಗಳಿಯೊಂದಿಗೆ ಅವರ ಸಂಗಡ ಇದ್ದಾನೆ.[4]

ಯೇಸುವಿಗೆ ಸಹಾಯಿಸುತ್ತಿದ್ದ, ಆತನೊಡನೆ ಮತ್ತು ಆತನ ಅಪೊಸ್ತಲರಡನೆ ಪ್ರಯಾಣಿಸುವಂಥ ಆ ನಿಶ್ಚಿತವಾದ ಸ್ತ್ರೀಯರ ಬಗೆಗೆ ಲೂಕನು ಹೇಳಿದ್ದಾನೆ. ಇವರು ತಮ್ಮ ಆಸ್ತಿಯಿಂದ "ಕರ್ತನಿಗೆ ಸಹಾಯ ಮಾಡುವವರಾಗಿದ್ದರು" (ಲೂಕ 8:3).[5] ತಮ್ಮ ಬೋಧಕರಿಗೆ ಸಹಾಯ ಮಾಡುವದು ಯೆಹೂದಿ ಸ್ತ್ರೀಯರಿಗೆ ಅಸಹಜವಾದ ಸಂಗತಿಯೇ ನಾಗಿರಲಿಲ್ಲ. ಇದರಲ್ಲಿನ ಸ್ತ್ರೀಯರ ಹೆಸರುಗಳು "ಏಳು ದೆವ್ವಗಳು ಬಿಟ್ಟುಹೋಗಿದ್ದ ಮಗ್ದಲದ ಮರಿಯಳು,[6] ಹೆರೋದನ ಮನೆವಾರ್ತೆಯನಾದ ಕೂಜನ ಹೆಂಡತಿ ಯೋಹಾನಳು,

ಸುಸನ್ನಳು" ಎಂದಿದ್ದವು (ಲೂಕ 8:2, 3).

ಮರಿಯಳು "ಮಗ್ದಲದವಳು" ಎಂದು ಕರೆಯಲ್ಪಡುತ್ತಿದ್ದಳು ಯಾಕೆಂದರೆ ಆಕೆಯು ಗಲಿಲಾಯ ಸಮುದ್ರದ ಪಶ್ಚಿಮ ತೀರದ ಮಗ್ದಲ ಎಂಬ ಚಿಕ್ಕ ಹಳ್ಳಿಯವಳಾಗಿದ್ದಳು.[7] ನಾವು ಅವಳನ್ನು ಇಲ್ಲಿ ತಿರುಗಿ ಭೇಟಿಯಾಗುತ್ತೇವೆ (ಮಾರ್ಕ 15:47; 16:1, 9; ಯೋಹಾನ 19:25; 20:1-18).

ಯೋಹಾನಳು ಹೆರೋದನ ಮನೆವಾರ್ತೆಯನಾದ ಕೂಜನ ಹೆಂಡತಿ ಎಂದು ಗುರುತಿಸಲ್ಪಟ್ಟಿದ್ದಾಳೆ. ಸಾಮಾನ್ಯವಾಗಿ "ಮನೆವಾರ್ತೆ" ಎಂಬ ಪದವು ಗ್ರೀಕ್ ವೇದಭಾಗದಲ್ಲಿ ಬಳಕೆಯಾಗುವುದಿಲ್ಲ. ಬದಲಾಗಿ "ಅಧಿಕಾರಿ, ಮೇಲ್ವಿಚಾರಕ ಅಥವಾ ಆಳುವವ" ಎಂಬರ್ಥದಲ್ಲಿ ಬಳಕೆಯಾಗುವುದಾಗಿದೆ.[8] "ಕೂಜನು ಹೆರೋದ ಅರಸನ ಉದ್ಯೋಗದ ಮೇಲ್ವಿಚಾರಕನಾಗಿದ್ದನು ಮತ್ತು ಅರಮನೆಯಲ್ಲಿಯೂ ಮತ್ತು ಸಾಮಾಜಿಕ ವಿಚಾರದಲ್ಲಿಯೂ ಆಡಳಿತದಲ್ಲಿದ್ದನು" ಎಂದು ಇದನ್ನು ಸಾರಾಂಶೀಕರಿಸುವುದಾಗಿದೆ. ಯೇಸುವಿನ ಸುದ್ದಿಯು ಹೆರೋದ ಮನೆಯವರೆಗೂ ಮುಟ್ಟಿತ್ತು! ನಾವು ಯೋಹಾನಳನ್ನು ನಂತರದಲ್ಲಿ ಭೇಟಿಯಾಗೋಣ (ಲೂಕ 24:10).

ಸುಸನ್ನಳ ಬಗೆಗೆ ನಾವೆಲ್ಲೂ ಓದುವುದಿಲ್ಲ. ಸುಸನ್ನಳ ಯಾವ ದಾಖಲೆಯೂ ಇಲ್ಲ. "ಇದು ಅವಳನ್ನು ಅಜರಾಮರವನ್ನಾಗಿಸುವದಕ್ಕಾಗಿಯೇ" ಎಂದು J. W. McGarvey ರವರು ಬರೆಯುತ್ತಾರೆ.[9]

ಯೇಸುವಿನೆಡೆಗೆ ಹಿಂತಿರುಗುತ್ತಾ ನಾವು ಹೀಗೆ ಓದುತ್ತೇವೆ. ಒಂದು ದಿನ ಆತನು "ತಿರುಗಿ ಮನೆಯೊಳಗೆ ಬಂದಾಗ ತಿರುಗಿ ಜನರು ನೆರದಿದ್ದಲಿಂದ" (ಮಾರ್ಕ 3:20). ಇದು ಕೇವಲ ಪ್ರಯಾಣದ ವೇಳೆಯ ಆರಂಭದಲ್ಲಿ ಯೇಸು ಅತಿಥೇಯನ ಮನೆಯನ್ನು ಪ್ರವೇಶಿಸಿದನು ಎಂದು ಅರ್ಥವನ್ನು ಕೊಡುವುದಾಗಿದೆ.[10] ಯೇಸುವಿನಿಂದ ನಡೆದ ಅನಂತರದ ಚಟುವಟಿಕೆಗಳು "ಸಮುದ್ರದಿಂದ" ನಡೆದಿದ್ದು (ಮಾರ್ಕ 4:1), ಇದು ಬಹುಶಃ ಆತನು ತನ್ನ ಪ್ರಯಾಣದ ಕೊನೆಯಲ್ಲಿ ಕಪೆರ್ನೌಮಿಗೆ ಮರಳುವಾಗ ಸಂಭವಿಸಿದ್ದಾಗಿರಬಹುದು - ಮತ್ತು "ಆ ಮನೆಯು" ಆ ಪಟ್ಟಣದಲ್ಲಿ ಸಾಮಾನ್ಯವಾಗಿ ಇರುವಂಥ ಮನೆಯಾಗಿರಬಹುದು.

ಪಟ್ಟಣದಲ್ಲಿ ಏನೇ ಆಗಿರಲಿ, ಆ ಒಂದು "(ಕೆಲಸದ) ಒತ್ತಡದ ದಿನ" ಸಂಭವಿಸಿದ ಕೆಲ ಘಟನೆಗಳನ್ನು ನಾವು ಸಮೀಕ್ಷಿಸುವಾ. ಅದೇ ದಿನ ಯೇಸು ಮತ್ತಾಯ 13, ಮಾರ್ಕ 4, ಮತ್ತು ಲೂಕ 8ರಲ್ಲಿ ದಾಖಲಾದಂತ ಸಾಮ್ಯಗಳನ್ನು ಮಾತನಾಡಿರಬಹುದು (ನೋಡಿ ಮತ್ತಾಯ 12:50-13:3). ಆ ದಿನವು ಗಲಿಲಾಯ ಸಮುದ್ರದ ಮೇಲಿನ ಬಿರುಗಾಳಿಯನ್ನು ನಿಲ್ಲಿಸಿದ್ದರ, ಮತ್ತು ಗೆರೆಸೇನೆಯ ದೆವ್ವಹಿಡಿದವನನ್ನು ವಾಸಿಮಾಡಿದ ಘಟನೆಗಳಿಂದ ಮುಗಿದಿರಬಹುದು (ಮಾರ್ಕ 4:33-5:19). ಈ ಘಟನೆಗಳನ್ನು ನಾವು ನಂತರದ ಪಾಠಗಳಲ್ಲಿ ಅಧ್ಯಯನಿಸಲಿದ್ದೇವೆ. ಆ ಸಮಯದಲ್ಲಿ, ಆ ದಿನವು ಹೇಗೆ ಪ್ರಾರಂಭವಾಯಿತು ಎಂದು ನಾವು ನೋಡುವಾ.

## ಜನರಿಗೆ ಸಹಾಯಿಸುವಲ್ಲಿ ನಿರತತೆ
## (ಮತ್ತಾಯ 12:22, 23; ಮಾರ್ಕ 3:20, 21; ಲೂಕ 11:14)

ಯೇಸು ಬೆಳಿಗ್ಗೆ ಮೊಬ್ಬಿರುವಾಗಲೇ ಅಡವಿಯ ಸ್ಥಳಕ್ಕೆ ಹೋಗಿ ಪ್ರಾರ್ಥಿಸುವ ಅಭ್ಯಾಸವನ್ನು ಇಟ್ಟು ಕೊಂಡಿದ್ದನು (ಮಾರ್ಕ 1:35). ನಮ್ಮ ಕಥೆಯು ಪ್ರಾರಂಭ ವಾಗುತ್ತಿದ್ದಂತೆ, ಕ್ರಿಸ್ತನು, ತನ್ನ ಮಧ್ಯಾಹ್ನದ ಊಟಕ್ಕಾಗಿ ತಾನು ಇರುತ್ತಿದ್ದ ಸ್ಥಳಕ್ಕೆ ಮರಳಿದನು. ಆತನು ಅಲ್ಲಿ ತಲುಪಿದಾಗ, ಆ ಮನೆಯು ಆತನ ಮಾತನ್ನು ಕೇಳಲು ಅಥವಾ ವಾಸಿಯಾಗಲು ಕಾತುರವಳ್ಳವರಾಗಿದ್ದ ಜನರಿಂದ ತುಂಬಿಹೋಗಿತ್ತು (ನೋಡಿರಿ ಮಾರ್ಕ 2:1, 2) ಮಾರ್ಕ 3:20: "ಆತನು ತಿರುಗಿ ಮನೆಯೊಳಗೆ ಬಂದಾಗ ತಿರುಗಿ ಜನರು ನೆನೆದಿದ್ದರಿಂದ (ಯೇಸು ಮತ್ತವನ ಶಿಷ್ಯರಿಗೆ) ಊಟಕ್ಕೂ ಅವಕಾಶವಾಗಲಿಲ್ಲ" ಎಂದು ಹೇಳುತ್ತದೆ.[11] ವಿಚಲಿತನಾಗದ ಕ್ರಿಸ್ತನು ಅವರಿಗೆ

ಸಹಾಯ ಮಾಡಲು ಆರಂಭಿಸಿದನು.

ಚಿತ್ತಸ್ವಸ್ಥತೆ, ದೃಷ್ಟಿಯ, ಮತ್ತು ಮಾತಿನ ಮೂರು ರೀತಿಯ ಗುಣಪಡಿಸುವಿಕೆಯನ್ನು ಒಳಗೊಂಡ ವಿಶಿಷ್ಟ ಅದ್ಭುತ ಕಾರ್ಯಗಳನ್ನು ವರದಿಯಾಗಿದೆ: ಕುರುಡನೂ ಮತ್ತು ಮೂಕನೂ ಆದ ಮನುಷ್ಯನೊಬ್ಬನಲ್ಲಿಯ ದೆವ್ವವನ್ನು ಯೇಸು ಬಿಡಿಸಿದನು[12] (ಮತ್ತಾಯ 12:22). ಜನರು ಆಶ್ಚರ್ಯಚಕಿತರಾದರು ಮತ್ತು "ಈತನು ದಾವೀದ ಕುಮಾರನೇನು?" ಎಂದು ಹೇಳಿದರು[13] (ಮತ್ತಾಯ 12:23).

ಏನೇ ಆಗಲಿ, ಯೇಸುವಿನ ಧಾವಂತದ ವಿವರಗಳ ಮಾತುಗಳು ಆತನ ಕೆಲ ಸ್ನೇಹಿತರು ಮತ್ತು ಆತನ ಕುಟುಂಬದವರ ಕಿವಿಗೆ ತಲುಪಿತು.[14] "ಇದನ್ನು ಕೇಳಿ ಆತನ ಸಂಬಂಧಿಗಳು ಅವನಿಗೆ ಹುಚ್ಚು ಹಿಡಿದದೆ ಎಂದು ಹೇಳಿ ಆತನನ್ನು ಹಿಡಿಯುವುದಕ್ಕೆ ಹೊರಟರು" (ಮಾರ್ಕ 3:21).[15] ತ್ಯಾಗವು ಇಹಲೋಕದ ಗುರಿಯನ್ನು ತಲುಪುವಾಗ ಬಲು ಕನಿಕರವಿದ್ದದ್ದಾಗಿರುತ್ತದೆ; ಲೌಕಿಕ ಕೆಲಸಕ್ಕಾಗಿ ಉದ್ದನೆಯ ತಾಸುಗಳ ಅವಶ್ಯಕತೆಯು ಇರುವುದನ್ನು ಅವರು ಅರಿತುಕೊಳ್ಳುತ್ತಾರೆ. ಅನೇಕರು ದೇವರ ರಾಜ್ಯಕ್ಕಾಗಿ ಯಾರೊಬ್ಬನೂ ತಮ್ಮನ್ನು ತಾವು ಬಲಿದುಮಾಡಿಕೊಳ್ಳಲು ಯಾಕೆ ಅರಿತುಕೊಳ್ಳುವವರಾಗಿರುವುದಿಲ್ಲ. ಕುಟುಂಬದವರು "ಆತನಿಗೆ ಹುಚ್ಚು ಹಿಡಿದದೆ" ಎಂದು ಯೋಚಿಸಿದರು. ನೀನು ದೇವರ ಮೇಲೆ ಬಲವಾದ ಪ್ರಾಮಾಣಿಕತೆಯನ್ನು ಇಟ್ಟಿದ್ದಾದರೆ (ಮತ್ತಾಯ 6:33), ನಿನ್ನ ಚಿತ್ತ ಸ್ವಾಸ್ಥ್ಯವನ್ನು ಕಳೆದು ಕೊಂಡಿದ್ದೀ ಎಂದು ಆರೋಪಿಸಿದಾಗ್ಯೂ ಆಶ್ಚರ್ಯಪಡದಿರು![16]

## ಆರೋಪಕ್ಕೆ ಉತ್ತರಿಸುವಲ್ಲಿ ನಿರತತೆ (ಮತ್ತಾಯ 12:24-37; ಮಾರ್ಕ 3:22-30; ಲೂಕ 11:15-23[17])

ಯೇಸು ಬೋಧಿಸುತ್ತಾ ಮತ್ತು ವಾಸಿಮಾಡುತ್ತಾ ಇದ್ದಾಗ, ಫರಿಸಾಯರೂ ಮತ್ತು ಶಾಸ್ತ್ರಿಗಳು (ಮತ್ತಾಯ 12:24; ಮಾರ್ಕ 3:22) ಸಾಮಾನ್ಯವಾಗಿ ಉಪಸ್ಥಿತರಿರುತ್ತಿದ್ದರು. ಕೆಲವರಂತೂ ಯೆರೂಸಲೇಮಿಗೆ (ಮಾರ್ಕ 3:22) ಆತನಿಗೆ ತೊಂದರೆ ಕೊಡಲು ಬರುವವರಾಗಿದ್ದರು. ಜನ ಸಮೂಹದ ಒಪ್ಪಿಕೊಳ್ಳುವಿಕೆ ಎಂದರೆ "ಈತನು ದಾವೀದ ಕುಮಾರನೇ" ಆಗಿರಬಹುದು ಎಂದು ಸ್ಪಷ್ಟವಾಗಿ ತಮ್ಮ ಹೃದಯವನ್ನು ಚುರುಕುಗೊಳಿಸಿದರು. ಅವರು ಬೇಗನೇ ಹೊಸ ದಾಳಿಗೆ ಸಾಗಿದರು. ಕ್ರಿಸ್ತನು ಮಹತ್ಕಾರ್ಯಗಳನ್ನು ಮಾಡಿದ್ದನ್ನು ಅಲ್ಲಗಳೆಯಲಿಲ್ಲ, ಅವರು ಸೈತಾನನೊಂದಿಗೆ ಕೂಡಿಕೊಂಡಿರುವುದನ್ನು ಆರೋಪಿಸುವವರಾಗಿದ್ದರು. "ಈತನನ್ನು ಬೆಲ್ಜಿಬೂಬನ ಹಿಡಿದಿದ್ದಾನೆ"[18]; ಈತನು "ದೆವ್ವಗಳ ಒಡೆಯನ ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಾ" ಎಂದು ಹೇಳಿದರು[19] (ಮಾರ್ಕ 3:22).

ಯೇಸು ಅವರ ಆರೋಪಕ್ಕೆ ಮೂರು ವಾದಗಳ ಮೂಲಕ ಉತ್ತರಿಸಿದನು.[20] ಆತನು ಹೇಳಿದ ಮೊದಲನೆಯದು ಅವರ ಆರೋಪವು *ತರ್ಕ ರಹಿತವಾದದ್ದು*" ಯಾವ ರಾಜ್ಯವಾದರೂ ತನ್ನಲ್ಲಿ ಭೇದ ಹುಟ್ಟಿದರೆ ಹಾಳಗುವದು. ತನ್ನಲ್ಲಿ ಬೇಧ ಹುಟ್ಟಿದ ಯಾವ ಪಟ್ಟಣವಾದರೂ ಮನೆಯಾದರೂ ನಿಲ್ಲದು. ಸೈತಾನನು ಸೈತಾನನನ್ನು ಹೊರಡಿಸಿದರೆ ತನ್ನಲ್ಲಿ ಬೇಧ ಹುಟ್ಟಿಸಿಕೊಂಡಂತಾಯಿತು. ಹಾಗಾದರೆ ಅವನ ರಾಜ್ಯ ಹೇಗೆ ಉಳಿದೀತು? (ಮತ್ತಾಯ 12:25, 26). ಎರಡನೆಯದಾಗಿ, ಅವರ ಆರೋಪವು ವಿಸಂಗತವಾದದ್ದು ಎಂದು ಆತನು ಹೇಳಿದನು. ತಮ್ಮ ಸ್ವಂತ "ಮಕ್ಕಳು" (ಅದು ಶಿಷ್ಯರು) ದೆವ್ವಗಳನ್ನು ಓಡಿಸುವುದರಲ್ಲಿ ಸಮರ್ಥ ರಾಗಿದ್ದರು ಎಂದು ಅವರು ನಂಬಿದ್ದರು (ಮತ್ತಾಯ 12:27), ಆದರೆ ತಮ್ಮ ಹಿಂಬಾಲಕರು ಸೈತಾನನಿಂದ ಶಕ್ತಿಯನ್ನು ಪಡೆದು ದೆವ್ವಗಳನ್ನು ಓಡಿಸುತ್ತಿದ್ದಾರೆ ಎಂದು ಅವರು ನಂಬುವವ ರಾಗಿರಲಿಲ್ಲ.[21] ಕ್ರಿಸ್ತನ ವಿರುದ್ಧ ಮಾಡಿದ ಯಾವುದೇ ಆರೋಪವು ತಮ್ಮ ಸ್ವಂತ ಜನರ ವಿರುದ್ಧವೂ ಕೂಡಾ ಇರುವದು ಆಗಿತ್ತು.[22]

ಮೂರನೆದಾಗಿ, ಅವರ ಆರೋಪವು ಅಸಾಧ್ಯವಾದದ್ದಾಗಿದೆ ಎಂದು ಆತನು ಹೇಳಿದನು.

ಬಲಿಷ್ಟನ ಮನೆಯನ್ನು ಸುಲುಕೊಳ್ಳುವಾಗ, ಮೊದಲು ಆ ಬಲಿಷ್ಟ ಮನುಷ್ಯನನ್ನು (ಸೈತಾನನು) ಕಟ್ಟಿಹಾಕುವದು ಅವಶ್ಯವಿದೆ (ಮತ್ತಾಯ 12:29). ಸೈತಾನನನ್ನು ಹೊರಹಾಕಬೇಕಾದರೆ, ಯೇಸು ಸೈತಾನನ್ನು ಸೋಲಿಸಬೇಕು. ಹೊರತು ಆತನನ್ನು ಕೆಣಕಬಾರದು.

ನಂತರ ಯೇಸು ರಕ್ಷಣಾತ್ಮಕತೆಯಿಂದ ಸಮರ್ಥತೆಯತ್ತ ತಿರುಗಿದನು. "ಆದಕಾರಣ ನಾನು ನಿಮಗೆ ಹೇಳುತ್ತೇನೆ," ಮನುಷ್ಯರು ಮಾಡುವ ಪ್ರತಿಯೊಂದೂ ಪಾಪಕ್ಕೂ ದೂಷಣೆಗೂ ಕ್ಷಮಾಪಣೆ ಉಂಟಾಗುವದು: ಆದರೆ ಪವಿತ್ರಾತ್ಮ ದೂಷಣೆಗೆ ಕ್ಷಮಾಪಣೆಯಿಲ್ಲ (ಮತ್ತಾಯ 12:31). "ದೂಷಣೆ" ಎಂಬ ಪದವು "ವಿರುದ್ಧವಾಗಿ ಮಾತನಾಡುವದು" ಎಂಬರ್ಥವನ್ನು ಹೊದಿದೆ. ಶಾಸ್ತ್ರಿಗಳು ಮತ್ತು ಫರಿಸಾಯರು ಪವಿತ್ರಾತ್ಮನ ವಿರುದ್ಧ ದೇವದೂಷಣೆಯ ಪಾಪದಲ್ಲಿ ಇದ್ದರು. ಯಾಕೆಂದರೆ ಅವರು ಆತ್ಮನ ಕಾರ್ಯವನ್ನು (ಮತಾಯ 12:28) ಸೈತಾನನಿಗೆ ಹೋಲಿಸುವವರಾಗಿದ್ದರು. ಅಂತೆಯೇ ಕ್ರಿಸ್ತನು "ಯಾವನಾದರೂ ಮನುಷ್ಯಕುಮಾರನಿಗೆ ವಿರೋಧವಾಗಿ ಮಾತನಾಡಿದರೆ, ಅದು ಅವನಿಗೆ ಕ್ಷಮಿಸಲ್ಪಡುವದಿಲ್ಲ" ಎಂದು ಹೇಳಿದನು (ಮತ್ತಾಯ 12:32).

ಯೇಸು ತನ್ನ ವೈರಿಗಳ ಎಚ್ಚರಿಕೆಯಿಲ್ಲದ ಬಾಯಿತಪ್ಪಿ ಮಾತಾಡಿದ ಮಾತನ್ನು ಖಂಡಿಸುವವನಾಗಿರಲಿಲ್ಲ ಎಂಬುದನ್ನು ಅರಿತುಕೊಳ್ಳಿರಿ. ಬದಲಾಗಿ ಆತನು ಅವರ ಹಠಮಾರಿಯಾದ ಕಠು ಹೃದಯಕ್ಕಾಗಿ ಅವರನ್ನು ಹೀಗೆ ಹೇಳುವವನಾಗಿದ್ದನು. "ಅದನ್ನು ಆತನು ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಬರುವದು" ಎಂದು ಒತ್ತಿ ಹೇಳು ವವನಾಗಿದ್ದಾನೆ (ಮತ್ತಾಯ 12:34ಬಿ), ಆ ರೀತಿಯ ಮನಸ್ಸನ್ನು ರೂಪಿಸಿಕೊಂಡಿರುವ ಅವರನ್ನು "ಕೆಟ್ಟದ್ದನ್ನು ಒಳ್ಳೆಯದೆಂದೂ, ಒಳ್ಳೆಯದನ್ನು ಕೆಟ್ಟದ್ದೆಂದೂ" ಹೇಳುವವರು ಎಂದು ಕರೆಯಬಹುದು (ಯೆಶಾಯ 5:20). ಶಾಸ್ತ್ರಿಗಳು ಮತ್ತು ಫರಿಸಾಯರು ಒಪ್ಪಿಕೊಳ್ಳಲಾರದಂತ ಸ್ಥಿತಿಯನ್ನು ಹೇಗೆ ತಲುಪಿದರು? ಯೇಸುವೇ ಮೆಸ್ಸೀಯನು ಎಂದು ಆತ್ಮನು ಉಂಟುಮಾಡುವ ಸಾಕ್ಷಿಯನ್ನು ಸತತವಾಗಿ ಮತ್ತು ನಿರಂತರವಾಗಿ ನಿರಾಕರಿಸುವ ಮೂಲಕ ಅವರ ಹೃದಯವು ಕಲ್ಲಿನಷ್ಟು ಕಠಿಣವಾಯಿತು (ಯೋಹಾನ 12:40).

ಅವರು "ಪರಿಶುದ್ಧಾತ್ಮನ ವಿರುದ್ಧ" ಕೆಲಸಾರಿ ಪಾಪಮಾಡಿದಾಗ ಆಶ್ಚರ್ಯವುಳ್ಳ ವರಾಗಿರುತ್ತಾರೆ. ಒಬ್ಬ ಜಾಣನಾದ ವೃದ್ಧ ಬೋಧಕನು ಹೀಗೆ ಹೇಳಿದನು "ನೀವು ಏನೇನು ಮಾಡಿದ್ದೀರಿ ಎಂಬುದರ ಬಗೆಗೆ ಚಿಂತಿಸುವವರಾಗಿದ್ದರೆ, ಅದನ್ನು ನೀವು ಮಾಡುತ್ತಿದ್ದಿಲ್ಲ." ಅಂಥ ಕಾಳಜಿಯೇ ಒಬ್ಬನ ಹೃದಯದ ಕೆಟ್ಟದ್ದಾದ ರೀತಿಯಲ್ಲಿ ಕಠಿಣವಾಗುವುದಿಲ್ಲ ಎಂದು ಆತನು ಅರ್ಥೈಸುವವನಾಗಿದ್ದಾನೆ. ನಿಜವಾಗಿಯೂ ಯೇಸು ಈ ಭೂಮಿಯ ಮೇಲೆ ಇದ್ದಾಗ, ಅದ್ಭುತ ಕಾರ್ಯಗಳನ್ನು ಆತ್ಮನ ಸಹಾಯದಿಂದ ಮಾಡುವವನಾಗಿದ್ದನು. ನಾನು ಮತ್ತು ನೀನು ಫರಿಸಾಯರು ಮಾಡಿದಂತಹ ಪಾಪವನ್ನೇ ಮಾಡಿದ್ದೇವೆ. ಇನ್ನೂ ನಾವು ಅದಕ್ಕೆ ಸಮಾನವಾದ ಪಾಪದಲ್ಲಿ ಇರುವವರಾಗಿದ್ದೇವೆ: ನಾವು ನಮ್ಮ ಹೃದಯಗಳನ್ನು ಎಷ್ಟು ಕಠಿಣವಾಗಿಸುವುದಕ್ಕೆ ಒಡಂಬಟ್ಟವರಾಗಿದ್ದೇವೆ ಎಂದರೆ "ತಿರುಗಿ ಪಶ್ಚಾತ್ತಾಪಪಟ್ಟು ಹೊಸದಾಗಿ ಆಗುವದು ಅವರಿಗೆ ಅಸಾಧ್ಯವಾದದ್ದು" ಆಗಿದೆ (ಇಬ್ರಿಯ 6:6; ನೋಡಿರಿ ವಚನ 4-6). ನಮ್ಮ ಹೃದಯವನ್ನು ಪಕ್ವಮಾಡಲು ದೇವರು ಸಹಾಯಮಾಡಲಿ (2 ಅರಸು 22:19)!

## ತಪ್ಪು ಗ್ರಹಿಕೆಗಳನ್ನು ಹೊಡೆದು ಹಾಕುವುದರಲ್ಲಿ ನಿರತರಾಗಿರುವದು (ಮತ್ತಾಯ 12:38-45; ಲೂಕ 11:16, 24-26, 29-36)

ಯೇಸುವಿನ ತರ್ಕದಲ್ಲಿ ತಪ್ಪನ್ನು ಕಂಡುಹಿಡಿಯಲಾಗದೆ ಮತ್ತು ಆತನ ಗದರುವಿಕೆಯಿಂದ ಮೀರಿ ಆತನ ವೈರಿಗಳು ಇನ್ನೊಂದು ದಾರಿಯನ್ನು ಹುಡುಕಿದರು: "ಆಗ ಶಾಸ್ತ್ರಿಗಳೂ ಫರಿಸಾಯರಲ್ಲಿ ಕೆಲವರು ಬೋಧಕನೇ,[23] ನಾವು ನಿನ್ನಿಂದಾಗುವ ಒಂದು ಸೂಚಕಕಾರ್ಯವನ್ನು ನೋಡಬೇಕೆಂದು ನಮಗೆ ಅಪೇಕ್ಷೆಯದೆ ಎಂದು ಆತನನ್ನು

ಕೇಳಿದರು" (ಮತ್ತಾಯ 12:38). ಅವರ ಮೊಂಡತನದ ಬಗೆಗೆ ಸ್ವಲ್ಪ ಯೋಚಿಸಿ. ಕ್ರಿಸ್ತನ ಅನುಸರಿಸುತ್ತಾ ಮೇಲಿಂದ ಮೇಲೆ ಸೂಚಕಕಾರ್ಯಗಳನ್ನು ನೋಡಿದರು. ಅದೇ ದಿನದಲ್ಲಿ ಅವರು ಮೂರು ಸೂಚಕಕಾರ್ಯಗಳು ಮಾಡಲ್ಪಟ್ಟದ್ದನ್ನು ನೋಡಿದರು. ಅದಕ್ಕಿಂತ ಹೆಚ್ಚಾಗಿ ಅವರಿಗೇನು ಬೇಕಾಗಿತ್ತು? ಲೂಕನು ಹೇಳುವಂತೆ, ಅವರಿಗೆ "ಆಕಾಶದಲ್ಲಿ ಸೂಚಕಕಾರ್ಯವನ್ನು ತೋರಿಸಿಕೊಡಬೇಕು" ಎಂದು ಬಯಸುವವರಾಗಿದ್ದರು (ಲೂಕ 11:16). ಬಹುಶಃ ಅವರು ಎಲಿಷನ ಪರಲೋಕದ ಬೆಂಕಿಯಂತೆ ಯೇಸುವಿಗೆ ಆಕಾಶದಿಂದ ಒಂದು ಉತ್ಪಾತವನ್ನು ಉತ್ಪತ್ತಿ ಮಾಡಲು ಸಾವಲು ಮಾಡುವವರಾಗಿದ್ದರು (1 ಅರಸು 18:36-38; 2 ಅರಸು 1:10).

ಯೇಸು "ಕೇಳುವಿಕೆಗಾಗಿ ಸೂಚಕಕಾರ್ಯಗಳನ್ನು" ಮಾಡುತ್ತಿರಲಿಲ್ಲ (ಮತಾಯ 4:3, 4; ಲೂಕ 23:8, 9). ಆತನು ಎಂದಿಗೂ ಅಸಹ್ಯವಾದದ್ದನ್ನು ತೋಲಿಸುವ ("ಪ್ರದರ್ಶನಕ್ಕಾಗಿ") ಸೂಚಕಕಾರ್ಯಗಳನ್ನು ಮಾಡುತ್ತಿರಲಿಲ್ಲ. ಅದಲ್ಲದೆ, ಆಕಾಶದಿಂದ ಆಗಲಿ ಭೂಮಿಯಿಂದಾಗಲಿ ಯಾವ ಸೂಚಕಕಾರ್ಯಗಳು ಇಲ್ಲ ಎಂದು ಈ ಕಠು ಹೃದಯದವರು ತಿಳಿಯಬೇಕೆಂದು ಆತನು ಬಯಸಿದ್ದನು. ಆತನು ಅವರಿಗೆ ಉತ್ತರಿಸುತ್ತಾ:

> ವ್ಯಭಿಚಾರಿಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕಕಾರ್ಯವನ್ನು[24] ನೋಡಬೇಕೆಂದು ಅಪೇಕ್ಷಿಸುತ್ತದೆ. ಆದರೆ[25] ಯೋನನೆಂಬ ಪ್ರವಾದಿಯಲ್ಲಿ[26] ಆದ ಸೂಚಕಕಾರ್ಯವೇ ಹೊರತು ಬೇರೆ ಯಾವದೂ ಇದಕ್ಕೆ ಸಿಕ್ಕುವುದಿಲ್ಲ. ಅಂದರೆ ಯೋನನು ಹೇಗೆ ಮೂರುದಿನ ರಾತ್ರಿ ಹಗಲು[27] ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ[28], ಹಾಗೆಯೇ ಮನುಷ್ಯಕುಮಾರನು ಮೂರುದಿನ ರಾತ್ರಿ ಭೂಗರ್ಭದೊಳಗೆ ಇರುವನು (ಮತ್ತಾಯ 12:39, 40)

ಇದು ಯೇಸುವಿನ ಪುನರುತ್ಥಾನದ ಬಗೆಗಿನ ಸೂಚನೆಯ ಒಂದು ಆಧಾರವಾಗಿತ್ತು: ಆತನ ಮರಣ ಮತ್ತು ಹೂಣಿಡುವಿಕೆಯ ಮೂರನೆಯ ದಿನನದ ನಂತರ, ಆತನು ತಿರುಗಿ ಏಳುವನು (ಮತ್ತಾಯ 16:21; 17:23; 20:19). ಕ್ರಿಸ್ತನ ವೈರಿಗಳಾಗಲಿ ಅಥವಾ ಆತನ ಶಿಷ್ಯರಾಗಲಿ ಆತನ ಮಾತುಗಳನ್ನು ಅರ್ಥಮಾಡಿಕೊಳ್ಳಲಿಲ್ಲ. (ಇದು ಯೇಸು ತನ್ನ ಮುಂಬರುವ ಮರಣವನ್ನು ಅಪೋಸ್ತಲರಿಗೆ ಪ್ರಕಟಿಸಿದಾಗ ಮಾತನಾಡಿದ ಮಾತುಗಳಾಗಿದ್ದವು.) ಅದಲ್ಲದೆ ಪುನರುತ್ಥಾನವು ಆತನು ದೇವರ ಮಗನು ಎಂಬುದಕ್ಕೆ ಇರುವ ಇನ್ನೊಂದು "ಚಿನ್ಹೆ" ಯಾಗಿತ್ತು (ರೋಮಾಪುರ 1:4).

ಯೇಸು ನಂತರ ಶಾಸ್ತ್ರಿಗಳು ಮತ್ತು ಫರಿಸಾಯರನ್ನು (ಮತ್ತು ಅವರಿಂದ ಪ್ರಭಾವಿತವಾದರನ್ನು) ಗದರಿಸುವುದನ್ನು ಮುಂದುವರೆಸಿದನು. ಧರ್ಮನಿಂದಕರಾದ ನಿನವೆಯರಂತೆಯೇ ಇವರು ಹಠವಾದಿಗಳು ಆಗಿದ್ದರು, ಮತ್ತು ವಿಗ್ರಹಾರಾಧಕಳಾದ ಶಿಬಾದ ರಾಣಿಯು ("ದಕ್ಷಿಣದ ರಾಣಿ") ಇವರಿಗಿಂತಲೂ ಬಹು ತೆರೆದ ಮನದವಳಿದ್ದಳು (ಮತ್ತಾಯ 12:41, 42; ಲೂಕ 11:31, 32). ತನ್ನ ವಿಮರ್ಶಕರು ತಮ್ಮ ಹೃದಯಗಳನ್ನು ತೆರೆಯಲಿ ಎಂದು, ಅವರು ಜೀವಿತವು "ಬೆಳಕಿನಿಂದ" ತುಂಬುವಂತೆ ಮಾಡಲು ಎರಡು ರೂಪಕಗಳನ್ನು ಜೋಡಿಸಿ ಅವರಿಗೆ ಬೋಧಿಸಲೆಂದು ಬಳಸಿದನು (ಲೂಕ 11:33-36).

ಯೇಸುವಿನ ಒಂದು ಆಘಾತಕಾರಿ ದೃಷ್ಟಾಂತ ಎಂದರೆ ಒಬ್ಬ ಮನುಷ್ಯನನ್ನು ಬಿಟ್ಟು ಹೋದ ದೆವ್ವವು ಮತ್ತೇ ಮರಳುವಾಗ ತನಗಿಂತ ಕೆಟ್ಟದಾದ ಇನ್ನೂ ಏಳು ದೆವ್ವಗಳನ್ನು ಕರೆದುಕೊಂಡು ಬಂದ ಉದಾಹರಣೆ ಆಘಾತಕಾರಿಯಾದದ್ದಾಗಿದೆ (ಮತ್ತುಯ 12:43-45; ಲೂಕ 11:24-26). ಈ ಚಿಕ್ಕ ಸಾಮ್ಯವು ಸಾಮಾನ್ಯ ಅನ್ವಯವನ್ನು ಹೊಂದಿದೆ; ಆದರೆ ಆ ಸಂದರ್ಭದಲ್ಲಿ, ಇದು ಯೆಹೂದಿ ನಾಯಕರನ್ನು ಸೂಚಿಸುವುದಾಗಿತ್ತು. ಬೆಬಿಲೋನಿಯದ ದಾಸತ್ವದ ನಂತರ, ಅವರು "ದೆವ್ವಗಳ" ವಿಗ್ರಹಾರಾಧನೆಯನ್ನು ಬಿಟ್ಟು ಬಿಟ್ಟರು -

ಆದರೆ ದೇವರಲ್ಲಿನ ನಂಬಿಕೆ ಮತ್ತು ಆತನ ಚಿತ್ತಕ್ಕೆ ವಿಧೇಯರಾಗುವದಕ್ಕಾಗಿ ಅವರು "ದೆವ್ವವನ್ನು" ತೆಗೆದುಹಾಕಲಿಲ್ಲ. ಇದರ ಪರಿಣಾಮವಾಗಿ, ಈಗ ಅವರು ಮೊದಲಿನ ದೆವ್ವಕ್ಕಿಂತಲೂ ಕೆಟ್ಟವುಗಳಾದ "ಏಳು ದೆವ್ವಗಳ" ಜೊತೆ ವಾಸವಾಗಿರುವವರು ಆಗಿದ್ದಾರೆ. "ದೆವ್ವಗಳು" ಅಲಕ್ಷತೆ, ಪೂರ್ವಾಗ್ರತೆ, ಸ್ವನೀತಿವಂತಿಕೆ, ಕಪಟಿಯೂ ಅಪನಂಬಿಕೆ, ತಿರುಗಿ ಬೀಳುವದು ಮತ್ತು ಮೌಲ್ಯಗಳ ಸ್ಥಳಾಂತರ ಇವುಗಳೇ ಆಗಿವೆ.[29]

## ಹೊಸ ಸಂಬಂಧಗಳನ್ನು ಸಂಸ್ಥಾಪಿಸುವಲ್ಲಿ ನಿರತತೆ (ಮತ್ತಾಯ 12:46-50; ಮಾರ್ಕ 3:31-35 ; ಲೂಕ 8:19-21; 11:27, 28[30])

ಯೇಸು ಬಲು ಗಟ್ಟಿಯಾಗಿ ಮಾತನಾಡುತ್ತಿದ್ದಾಗ, ಜನಜಂಗುಳಿಯಲ್ಲಿದ್ದ ಸ್ತ್ರೀಯು "ನಿನ್ನನ್ನು ಹೊತ್ತ ಗರ್ಭವೂ ನೀನು ಕುಡಿದ ಮೊಲೆಗಳೂ ಧನ್ಯವಾದವುಗಳು" ಎಂದು ಕೂಗಿದಳು (ಲೂಕ 11:27). ಮರಿಯಳ ಬಗ್ಗೆ ಹೇಳುವಂತ ಒಂದೇ ಒಂದು ದಾಖಲೆಯು ಇದಾಗಿದೆ (ಲೂಕ 1:48). ಕ್ರಿಸ್ತನು ಇದಕ್ಕೆ ಉತ್ತರಿಸುತ್ತಾ "ದೇವರ ವಾಕ್ಯವನ್ನು ಕೇಳಿ ಅದಕ್ಕೆ ಸರಿಯಾಗಿ ನಡೆದುಕೊಳ್ಳುವವರೇ ಧನ್ಯರು" ಎಂದು ಹೇಳಿದನು (ಲೂಕ 11:28).[31]

ಇಲ್ಲಿ ಯೇಸು ತಾನು ಪ್ರೀತಿಸುವ[32] ತನ್ನ ತಾಯಿಯನ್ನು ಕೆಳಕ್ಕಿಳಿಸುತ್ತಾ ಇಲ್ಲ, ಬದಲಾಗಿ ದೇವರ ವಿಧೇಯ ಮಗನಾಗಿ ಇರುವದು ಕ್ರಿಸ್ತನ ತಾಯಿ ಆಗಿರುವುದಕ್ಕಿಂತಲೂ ಮಹತ್ವದ್ದಾಗಿತ್ತು. ಇದು ನಮ್ಮೆಲ್ಲರಿಗೂ ಎಂಥ ಉತ್ತೇಜನಕಾರಿಯಲ್ಲವೇ! ಕರ್ತನ ಭೌತಿಕ ತಾಯಿ ಒಬ್ಬಳೇ ಆಗಿರಬಹುದು; ಆದರೆ ನಮ್ಮಲ್ಲಿ ಎಲ್ಲರೂ ಆತನ ಶಿಷ್ಯರಾಗಿದ್ದೇವೆ. ಈ ಮಹತ್ವದ ಸತ್ಯವು ಕೆಲ ಸಮಯದ ಹಿಂದೆ ತಿರುಗಿ ಒತ್ತಿ ಹೇಳಲ್ಪಟ್ಟಿದೆ.

ಕ್ರಿಸ್ತನು ಜನಸಮೂಹಕ್ಕೆ ಬೋಧಿಸುವುದನ್ನು ಮುಂದುವರೆಸಿದಾಗ (ಮತ್ತಾಯ 12:46), "ಆತನ ತಾಯಿಯೂ ತಮ್ಮಂದಿರು"[33] ಬಂದರು (ಮಾರ್ಕ 3:31). ಆತನನ್ನು ಗುಂಪಿನಲ್ಲಿ[34] ಕಾಣಲು ಅಸಮರ್ಥರಾದ ಕಾರಣ ಅವರು ಆತನನ್ನು ತಮ್ಮನ್ನು ನೋಡಲು ಕರೆಕಳುಹಿಸಿದರು (3:31ಬಿ, 32). ಅವರು ಯಾಕೆ ಯೇಸುವನ್ನು ನೋಡಲು ಬಂದಿದ್ದರೋ ನಮಗೆ ಖಚಿತವಾಗಿ ತಿಳಿಯದು. ಮಾರ್ಕ 3:21 ಮತ್ತು 3:31 ಒಂದಕ್ಕೊಂದು ಜೊತೆಯಾದ ಹಾಗೆ ಕಾಣುತ್ತವೆ; ಬಹುಶಃ ಒತ್ತಾಯದ ವಿಶ್ರಾಂತಿಗಾಗಿ ಕುಟುಂಬದವರು ಆತನನ್ನು ಮನೆಗೆ ಕರೆದೊಯ್ಯಲು ಬಂದಿರಬಹುದು.[35] ಅವರ ಕಾರಣವು ಏನೇ ಇರಲಿ, ಅಲ್ಲಿನ ಮಾತುಗಳು "ನಿನ್ನ ತಾಯಿಯ ನಿನ್ನ ತಮ್ಮಂದಿರು ... ನಿಂತಿರುತ್ತಾರೆ ನೋಡು" (ಮಾರ್ಕ 3:32) ಎಂಬವು ಯೇಸುವಿನ ಉಪಸ್ಥಿತಿಯ ಅಡ್ಡಿಪಡಿಸುವಿಕೆಯನ್ನು ರಚಿಸುವುದಾಗಿದೆ.

ಎಂದಿಗೂ ಗುರುಗಳ ಗುರುವಾದ ಕ್ರಿಸ್ತನು ಆ ಅಡ್ಡಿಪಡಿಸುವಿಕೆಯಿಂದ "ನನಗೆ ತಾಯಿ ಯಾರು? ನನಗೆ ಅಣ್ಣತಮ್ಮಂದಿರು ಯಾರು?" ಎಂದು ಕೇಳುವ ಮೂಲಕ ಬೋಧನೆಯ ಅವಕಾಶಕ್ಕಾಗಿ ತಿರುಗಿಕೊಂಡನು (ಮತ್ತಾಯ 12:48). ಹತ್ತಿರದಲ್ಲಿ ಕೂತಿದ್ದ ತನ್ನ ಶಿಷ್ಯರತ್ತ ತೋರಿಸುತ್ತಾ, "ಇಗೋ, ನನ್ನ ತಾಯಿ, ನನ್ನ ಅಣ್ಣತಮ್ಮಂದಿರು. ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ನನಗೆ ತಮ್ಮನೂ ತಂಗಿಯೂ ಆಗಿರಬೇಕು" ಅಂದನು (12:49ಬಿ, 50). ಲೂಕನು ಯೇಸುವಿನ ಘೋಷಣೆಯನ್ನು ಈ ಮಾತುಗಳಲ್ಲಿ ವಿವರಿಸಿದ್ದಾನೆ. "ಯಾರು ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯುತ್ತಾರೋ ಅವರೇ ನನಗೆ ತಾಯಿಯೂ ಅಣ್ಣ ತಮ್ಮಂದಿರು ಆಗಬೇಕು" (ಲೂಕ 8:21).

ಕ್ರಿಸ್ತನು ತನ್ನ ಕುಟುಂಬದೊಂದಿಗಿನ ಸಂಬಂಧವನ್ನು ತೃಣೀಕರಿಸುತ್ತಿಲ್ಲ. ಕುಟುಂಬದ ಜವಾಬ್ದಾರಿಗಳು ಬಹು ಮೌಲ್ಯವಾಗಿ ಪ್ರಮುಖವಾಗಿದ್ದವು (ಮತ್ತಾಯ 15:4-6; ಯೋಹಾನ 19:26, 27; ನೋಡಿ 1 ತಿಮೊಥೆ 5:8). ಮತ್ತೊಂದು ಸಾರಿ, ಹೇಗೋ ಆತನು ಆತನ

ಭೌತಿಕ ಜೀವಿತಕ್ಕಿಂತಲೂ ಉನ್ನತವಾದ ಮತ್ತು ಶ್ರೇಷ್ಟವಾದ ಸಂಬಂಧವು ಇದೆ ಎಂದು ಆತನು ಒತ್ತಿಹೇಳುವವನಾಗಿದ್ದನು. ಅದು ನಮ್ಮ ಆತ್ಮೀಕ ಬಂಧದೊಡನೆ ಮತ್ತು ತಂದೆಯೊಡನೆ ಇರುವುದಾಗಿದೆ. ನಾವು "ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆದಿದ್ದಾದರೆ" ಎಂಬುದು (ಲೂಕ 8:21; ನೋಡಿ ಮತ್ತಾಯ 7:21-27), ಆತನು ತನ್ನ ತಾಯಿಯೊಡನೆ ಮತ್ತು ಇಹಲೋಕದ ಸಹೋದರರೊಡನೆ ಆನಂದಿಸಿದ್ದಕಿಂತ ಹೆಚ್ಚಾಗಿ ನಾವು ಯೇಸುವಿನೊಡನೆ ಹತ್ತಿರದ ಸಂಬಂಧವನ್ನು ಹೊಂದಬೇಕಾಗಿದೆ![36]

ಈ ಮಾತುಗಳು ಕ್ರಿಸ್ತನ ಶಿಷ್ಯರನ್ನು (ನಮಗೂ ಕೂಡಾ) ಪ್ರೋತ್ಸಾಹಿಸಲು ಇರುವ ಮಾತುಗಳು ಆಗಿವೆ. ಕರ್ತನ ಈ ಮಾತುಗಳನ್ನು ಬಲು ಕ್ರೂರವಾಗಿ ಆಕ್ರಮಣಕ್ಕೊಳಗಾದ ಈ ದಿವಸದ ಸಂದರ್ಭದಲ್ಲಿ ಅವಲೋಕಿಸಿರಿ. ಆತನು ಇಲ್ಲಿಂದ ಹೋದ ನಂತರ ಸಭೆಗಾಗಿ ಬೀಜವನ್ನು ವಿತರಿಸುವ ಸಮರ್ಪಣಾ ಭಾವದ ಶಿಷ್ಯರ ಗುಂಪು ಆತನಿಗೆ ಅವಶ್ಯವಾಗಿತ್ತು. ಈ ಹೊಸ ಸಂಬಂಧಗಳು, ಕೊನೆಗೊಳ್ಳದ ಸಂಬಂಧಗಳು ಸ್ಥಾಪಿಸಬೇಕಾಗಿರುವದು ಅತ್ಯಗತ್ಯ ವಾಗಿದೆ.

## ಮುಕ್ತಾಯ

ಅನೇಕ ಸಂಗತಿಗಳು ನಡೆದು ಹೋದರೂ ಕೂಡಾ ಆ ದಿನವು ಮುಗಿಯಲಾರದ ದಿನ ವಾಗಿತ್ತು. ಬೋಧನೆಯಲ್ಲಿ ಇನ್ನೂ ಬೋಧಿಸಬೇಕಾದದ್ದು ಗಮನಾರ್ಹವಾದ ಅಸಂಖ್ಯಾತ ಸೂಚಕಕಾರ್ಯಗಳ ಜೊತೆ ಇನ್ನೂ ಉಳಿದಿತ್ತು.[37] ಒಂದು ವೇಳೆ, ನಾನು ಯೇಸು ಆಗಿದ್ದಾದರೆ, ನಾನು ಈಗಾಗಲೇ ಸಾಕಾಗಿ ಹೋಗಿರುತ್ತಿದೆನು. (ಟೀಕ್ಕಾಟ, ಸಂಘರ್ಷ ಮತ್ತು ತಕರಾರುಗಳು ನನ್ನ ಶಕ್ತಿಯನ್ನು ಕುಂದಿಸುವಂತವು ಆಗಿವೆ.) ಹೇಗೋ ನಮ್ಮ ಅಧ್ಯಯನದ ಈ ದಿನದ ಉಳಿದ ಸಂಗತಿಗಳನ್ನು ತಿಳಿದುಕೊಳ್ಳಬೇಕಾದರೆ ಮುಂದಿನ ಪಾಠಗಳಿಗಾಗಿ ಕಾಯಬೇಕಾಗಿದೆ. ಈಗ ಒತ್ತಡದ ಇಪ್ಪತ್ನಾಲ್ಕು ಘಂಟೆಗಳ ಅವಧಿಯ ಆ ದಿನಕ್ಕೆ ತೆರೆ ಎಳೆಯು ಸಮಯವು ಇದಾಗಿದೆ.

ಪ್ರಾಯೋಗಿಕ ಪಾಠಗಳು ನಮ್ಮ ವೇದಭಾಗದ[38] ಮೂಲಕ ಮನದ ಆಳದಲ್ಲಿ ಹಾಕಲ್ಪಟ್ಟಿವೆ. ನಾವು ಅಧ್ಯಯನ ಮಾಡಿದ ಹೃದಯಭಾಗವು ಮತ್ತಾಯ 12:30ರಲ್ಲಿ ಸಿಕ್ಕುವುದಾಗಿದೆ. ಯೇಸು ಹೀಗೆ ಹೇಳುತ್ತಾನೆ. "ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ; ನನ್ನ ಜೊತೆಯಲ್ಲಿ ಒಟ್ಟುಗೂಡಿಸಿದವನು ಚದುರಿಸುವವನಾಗಿರುತ್ತಾನೆ." ನಾವು ಯೇಸುವಿನ ಪಕ್ಷದಲ್ಲಿ ಆದರೂ ಇದ್ದೇವೆಯಾ ಅಥವಾ ಇಲ್ಲ. ಅಲ್ಲಿ ಯಾವ ಎರಡೂ ಕಡೆ ನಿಲ್ಲುವ ಸ್ಥಳ ಇಲ್ಲ. ನೆಲೆಯೂ ಇಲ್ಲ. ನಾನು ಯಾರ ಪಕ್ಷದಲ್ಲಿದ್ದೇನೆ? ನೀನು ಯಾರ ಪಕ್ಷದಲ್ಲಿರುವಿ?

---

ಟಿಪ್ಪಣೆಗಳು

[1]A. T. Robertson, *A Harmony of the Gospels for Students of the Life of Christ* (New York: Harper & Row, 1950), 61. [2]ಲೂಕನು ಮಾತ್ರ ಈ ಪ್ರಯಾಣವನ್ನು ದಾಖಲಿಸಿದ್ದಾನೆ, ಮತ್ತಾಯ ಮತ್ತು ಮಾರ್ಕರಲ್ಲಿ ಕಪೆರ್ನೌಮಿನಿಂದ ಹೊರಗೆ ಪ್ರಯಾಣಿಸಿದ ಬಗೆಗೆ ಸುಳಿಯನ್ನು ಹೊಂದಿದ್ದೇವೆ. [3]ಇದನ್ನು ಹಿಂದಿನ ಪುಸ್ತಕದಲ್ಲಿನ "ಅಧಿಕಾರ ಹೊಂದಿದವನು" ಎಂಬ ಪಾಠದಲ್ಲಿ ನೋಡಿರಿ. [4]ಹಿಂದಿನ ಪಾಠವಾದ "ಪ್ರೀತಿ, ಕಣ್ಣೀರು ಮತ್ತು ಕ್ಷಮಾಪಣೆ"ಯ ಪರಿಚಯವನ್ನು ನೋಡಿರಿ. [5]ಯೇಸು ಮತ್ತು ಅಪೋಸ್ತಲರು ತಾವಿರುವ ಊರಿನ ಜನರಿಂದ ಊಟ ಮಾಡಿಸಲ್ಪಡಲಿಲ್ಲ, ಆ ಸ್ತ್ರೀಯು ಬಹುಶಃ ಆಹಾರವನ್ನು ತಂದಿದ್ದಳು ಮತ್ತು ಅದನ್ನು ಸಿದ್ಧಪಡಿಸಿದ್ದಳು. ನಾವು ಹಾಗೆ ಮಾಡಲು ಆಗದ್ದರಿಂದ ನಮ್ಮಬೆಂಬಲವು ಉದಾರತೆಗಿದ್ದು ಯೇಸು ಬಡ ಜನರ ಮಧ್ಯದಲ್ಲಿ ಇರುವುದನ್ನು ಚಿತ್ರಿಸುವುದಾಗಿದೆ (ಲೂಕ 9:48; 2 ಕೊರಿಂಥ 8:9; ನೋಡಿರಿ ಮತ್ತಾಯ 17:24-26). [6]ಆ "ಪ್ರೀತಿ, ಕಣ್ಣೀರು ಮತ್ತು ಕ್ಷಮಾಪಣೆ" ಎಂಬಲ್ಲಿ ಸಿಮೋನನ ಮನೆಯಲ್ಲಿ ಯೇಸುವನ್ನು ಅಭಿಷೇಕಿಸಿದ

ಪಾಪಿಯಾದ ಹೆಂಗಸು ಮಗ್ದಲದ ಮರಿಯಳು ಎಂದು ನಂಬುವುದಕ್ಕೆ ಯಾವ ಕಾರಣಗಳೂ ಇಲ್ಲ. ಮರಿಯಳು ದೆವ್ವಹಿಡಿದ್ದರಿಂದ ಗುಣವಾಗಿದ್ದಳು ಹೊರತಾಗಿ ವ್ಯಭಿಚಾರಿಣಿಯಾಗಿ ಅಲ್ಲ. ಮರಿಯಳು ಕೃತಜ್ಞತಾಪೂರ್ವಕವಾಗಿದ್ದುದರಲ್ಲಿ ಯಾವ ಆಶ್ಚರ್ಯವೂ ಇಲ್ಲ! [7]ಈ ಪುಸ್ತಕದಲ್ಲಿ ಸಿಕ್ಕುವ "ಯೇಸುವಿನ ಜೀವಿತಾವಧಿಯ ಆರಂಭದ ಪಾಲಿಸ್ತೇನ್" ಎಂಬ ನಕಾಶೆಯನ್ನು ನೋಡಿರಿ. [8]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 297. [9]Ibid., 297. [10]NASBಯ ನನ್ನ ಪ್ರತಿಯಲ್ಲಿನ ಟಿಪ್ಪಣೆಯಲ್ಲಿ "ಮನೆಯ" ಮೇಲಿನ ಟಿಪ್ಪಣೆಯಲ್ಲಿ "(ಅಕ್ಷರ ಸಹ), ಮನೆಯೊಳಗೆ ಎಂದಿದೆ."

[11]ಮಾರ್ಕ 6:31ರ ಜೊತೆ ಈ ಪರಿಚ್ಛೇದವನ್ನು ಹೋಲಿಸಿರಿ. [12]ಮಾತನಾಡಲು ಬಾರದ್ದು ಸಾಮಾನ್ಯವಾಗಿ ಕೇಳಲು ಬಾರದ್ದನು ಸಹ ಸೂಚಿಸುವುದಾಗಿದೆ, ಆದ್ದರಿಂದ ಇದು ನಿಜವಾಗಿ ನಾಲ್ಪಡಿ ಸೂಚಕಕಾರ್ಯವಾಗಿರುವದನ್ನು ಸೂಚಿಸುವುದಾಗಿದೆ. [13]ಮೂಲದಲ್ಲಿ ವಾಕ್ಯದ ರೀತಿಯು ಯೇಸು "ದಾವೀದ ಕುಮಾರನು" (ಅದು ಮೆಸ್ಸೀಯನು) ಆಗಿದ್ದನು ನಮಗೆ ಗುರಿತಿಸುವ ಎಚ್ಚರಿಕೆಯನ್ನು ಸೂಚಿಸುವುದಾಗಿದೆ. [14]ಗ್ರೀಕ್ ಭಾಷೆಯ ಭಾಷಾಂತರವು "ಆತನ ಸ್ವಂತ ಜನರು" ಇದರ ಅಕ್ಷರ ಸಹ ಅರ್ಥವು "ಆತನೊಡನೆ ಇರುವವರು" ಎಂದಾಗಿದೆ. ಇವರು ಯೇಸುವಿನೊಡನೆ ಸಂಬಂಧವನ್ನು ಹೊಂದಿದವ ರಾಗಿದ್ದರು. KJVಯಲ್ಲಿ "ಆತನ ಸ್ನೇಹಿತರು" ಎಂದಿದೆ. NIVಯಲ್ಲಿ "ಆತನ ಕುಟುಂಬ" ಎಂದಿದೆ. [15]ಗ್ರೀಕ್ ಪದದ ಭಾಷಾಂತರವು "ತಮ್ಮ ವಶಕ್ಕೆ ತೆಗೆದುಕೊಳ್ಳುವದು" ಎಂದಿದ್ದು ಇದರ ಅಕ್ಷರ ಸಹ ಅರ್ಥವು "ಬಂದುಮಾಡು" ಎಂದಾಗಿದೆ. ಇದು ಕೆಲಸಾರಿ, ಹೊಸ ಒಡಂಬಡಿಕೆಯಲ್ಲಿ ಬಳಸಲ್ಪಟ್ಟಿದ್ದು ಒಬ್ಬನನ್ನು ಬಂಧಿಸುವುದಕ್ಕೆ ಸೂಚಿತವಾಗುವುದಾಗಿದೆ (ಮತ್ತಾಯ 14:3; ಅಪೊಸ್ತರ ಕೃತ್ಯಗಳು 24:6). ಅವರು ಆತನನ್ನು ತಮ್ಮ ಜೊತೆ ಆತನಿಗೆ ಮನಸ್ಸಿರಲಿ ಬಿಡಲಿ ಒತ್ತಾಯ ಪೂರ್ವಕವಾಗಿ ತೆಗೆದುಕೊಂಡು ಹೋಗುವುದನ್ನು ಈ ಪದವು ಸೂಚಿಸುವುದಾಗಿದೆ. [16]ಮಾನಸಿಕವಾಗಿ ಸಮರ್ಥ ಎಂಬ ಪದಕ್ಕೆ ನಾವು ಆಡು ನುಡಿಯ ಪರಿಭಾಷೆಯನ್ನು ಹೊಂದಿ ದ್ದೇವೆ. ನೀವು ಇರುವೆಡೆ ಅರ್ಥವಾಗುವಂತಹದನ್ನು ನೀವು ಬಳಸಿಕೊಳ್ಳಿರಿ. [17]ಲೂಕನ ಪ್ರಕಾರ ಫರಿಸಾಯರು ದೇವದೋಷಣೆಯ ಆರೋಪವು ವಿಭಿನ್ನ ಸಮಯ ಮತ್ತು ಸ್ಥಳದಲ್ಲಿ ಆಗಿದ್ದಾಗಿದೆ ಆದರೆ ಅದಕ್ಕೆ ಸಮಾನವಾದದ್ದಾಗಿದ್ದು ಆಗಿದೆ. ಆದರೆ ಮತ್ತಾಯ ಮತ್ತು ಮಾರ್ಕರ ವಿವರಣೆಯ ಜೊತೆಯಲ್ಲಿ ಅಧ್ಯಯನ ಮಾಡುವದು ಲಾಭದಾಯಕ ಆಗಿದೆ. [18]"ಬೆಲ್ಜಬೂಲ" (ಅಥವಾ "ಬೆಲ್ಜಬೂಬ" ಅಥವಾ ಬಾಲ - ಜೆಬೋಬ್) ವಿಗ್ರಹ ದೇವತೆಯ ಹೆಸರು ಆಗಿದೆ (2 ಅರಸು 1:2). ಆ ಹೆಸರಿನ ಅಕ್ಷರಸಹ ಅರ್ಥವು "ನೊಣಗಳ ದೇವರು" ಈ ಸಂದರ್ಭದಲ್ಲಿ, ಈ ಹೆಸರು ಸೈತಾನನನ್ನು ಸೂಚಿಸಲು ಬಳಸಲ್ಪಡುವದು ಆಗಿದೆ (ಮಾರ್ಕ 3:22, 23). [19]KJVಯಲ್ಲಿ "ದೆವ್ವಗಳು" ಎಂದಿದೆ, ಆದರೆ ಅಲ್ಲಿ ಒಂದೇ ಒಂದು ದೆವ್ವವು ಇದೆ. ಮೂಲ ವೇದಭಾಗದಲ್ಲಿ "ದೆವ್ವಗಳು" ಎಂದಿದೆ. [20]ಮಾರ್ಕನ ಈ ವಾದಗಳನ್ನು "ಸಾಮ್ಯಗಳು" (ಮಾರ್ಕ 3:23) ಎಂದು ಕರೆದನು.

[21]ಇದು ಸೂಚಿಸಲ್ಪಟ್ಟದ್ದಾಗಿದೆ. [22]ಯೆಹೂದಿಗಳು ದೆವ್ವವನ್ನು ಓಡಿಸುವರು ಎಂದು ಆತನು ನಂಬುವುದನ್ನು ಸಾಧಿಸುವುದಕ್ಕೆ ಯೇಸುವಿನ ವಾದವು ಅವಶ್ಯವಾಗಿರಲಿಲ್ಲ. ಅಲ್ಲಿ ಯೆಹೂದಿ ಮಾಂತ್ರಿಕರ ಮೂಢನಂಬಿಕೆಯ ಆಚಾರದ ಮಧ್ಯ ಹಾಗೂ "ದೇವವಾಕ್ಯದಿಂದ" ದೆವ್ವಗಳನ್ನು ಬಿಡಿಸುವ ಮಧ್ಯ ವಿಶಾಲವಾದ ವ್ಯತ್ಯಾಸವಿದೆ. [23]ಯೇಸು ಅವರಿಗೆ ಈ ಹೆಸರನ್ನು ಕೊಡುವಾಗ ಎರಡು ಬುದ್ಧಿಯುಳ್ಳದ್ದು ಅದರಲ್ಲಿ ಒಳಗೊಂಡಿದೆ. ಈ ಪರಿಚ್ಛೇದವನ್ನು ಲೂಕ 7:40ರ ಜೊತೆ ಹೋಲಿಸಿರಿ. (ನೀವು ಬಯಸಿದಲ್ಲಿ ಈ ಮೊದಲು ಈ ಪುಸ್ತಕದಲ್ಲಿ ಸಿಕ್ಕುವ ಚರ್ಚೆಯೊಂದಿಗೆ ಪುನರಾಮರ್ಷಿಸಬಹುದು). [24]1 ಕೊರಿಂಥ 1:22ನ್ನು ನೋಡಿರಿ. [25]ಸೂಚಕಕಾರ್ಯಗಳನ್ನು (ಅದ್ಭುತ ಕೃತ್ಯಗಳನ್ನು) ಯೇಸು ನಿರಂತರವಾಗಿ ಮಾಡುತ್ತಿದ್ದಾಗ್ಯೂ ಇದರರ್ಥ ಅದಕ್ಕೆ ಜೊತೆಯಾಗಿ ಯಾವ ಸೂಚಕಕಾರ್ಯಗಳಲ್ಲದೆ (ಈಗಾಗಲೇ ಮಾಡಲ್ಪಡುತ್ತಿದ್ದ ಅದ್ಭುತಕಾರ್ಯಗಳಲ್ಲದೆ) ಕೊಡಲ್ಪಟ್ಟಂಥವು ಎಂದರೆ ಯೋನನ ಸೂಚಕಕಾರ್ಯವನ್ನು ಬಿಟ್ಟು (ಅದು ಪುನರಾತ್ಥನವೇ). [26]ಮತ್ತಾಯ 16:4 ನೋಡಿರಿ. [27]"ಮೂರು ದಿನ ಹಗಲು ಮತ್ತು ರಾತ್ರಿ" ಎಂಬ ಪದಗುಚ್ಛವು ಕೆಲವಕ್ಕೆ ಸಂಬಂಧಿಸಿವೆ. ಆದ್ದರಿಂದ ನಮಗೆ ತಿಳಿದ ಪ್ರಕಾರ ಯೇಸು ಇಡೀ ದಿನವನ್ನು ಎರಡು ದಿನದ ಮತ್ತು ಎರಡು ರಾತ್ರಿಯ ಭಾಗವಾಗಿ ಸಮಾಧಿಯಲ್ಲಿ ಕಳೆದನು. ಮೂಲ ಉತ್ತರ ಎಂದರೆ ಯೆಹೂದಿಗಳು ಹಗಲನ್ನು ಇಡೀ ದಿನವೆಂದು ಎಣಿಸುತ್ತಿದ್ದರು. [28]KJVಯಲ್ಲಿ "ತಿಮಿಂಗಲು" ಎಂದಿದೆ, ಆದರೆ ಗ್ರೀಕ್ ವೇದಭಾಗದಲ್ಲಿ "ಸಮುದ್ರದ ಮೀನು" ಎಂದಿದೆ NKJV ಯಲ್ಲಿ ಹಳೆಯ ಒಡಂಬಡಿಕೆಯಲ್ಲಿನ ಕಥೆಯಲ್ಲಿ "ದೊಡ್ಡ ಮೀನು" ಎಂದಿದೆ (ಯೋಹಾನ 1:17). ಕೆಲವರು ಇದನ್ನು ಕಟ್ಟುಕಥೆಯೆಂದು ವಾದಿಸುವವರಾಗಿದ್ದಾರೆ, ಆದರೆ ಯೇಸು ಇದು ನಿಜವಾಗಿ ಸಂಭವಿಸಿದ್ದೆಂದು ಹೇಳುತ್ತಾನೆ! [29]ನನ್ನನ್ನು ಅಪಾರ್ಥಮಾಡಿಕೊಳ್ಳಬೇಡಿರಿ. ದೆವ್ವಗಳು ನಿಜವಾಗಿಯೂ ಆತ್ಮೀಕ ಜೀವಿಗಳು ಆಗಿದ್ದವು (ಅಥವಾ ಆಗಿವೆ) ಎಂದು ನಾನು ಹೇಳುತ್ತಿಲ್ಲ. ಬದಲಾಗಿ, ಈ ಸಾಮ್ಯದಲ್ಲಿ

ಕೆಲ ಸಮಾನ ಮಾತುಗಳನ್ನು ತೋರಿಸ ಬಯಸುತ್ತೇನೆ - ದೆವ್ವಗಳಿಂದ ತುಂಬಿದ ಒಬ್ಬ ಮನುಷ್ಯ ಮತ್ತು ಪಾಪಗಳಿಂದ ತುಂಬಿದ ಯೆಹೂದಿ ನಾಯಕರ ಮಧ್ಯದ ಸಾಮ್ಯತೆಯಿರುವುದಾಗಿದೆ. ಈ ನಾಯಕರು ನಿಶ್ಚಿತವಾಗಿ ದೆವ್ವದಿಂದ ತಂಬಿದವರಾಗಿರಲಿಲ್ಲ. ಆದರೆ ಅವರು ಖಂಡಿತವಾಗಿ ದೆವ್ವ ಮತ್ತು ಆತನ ಸೈನ್ಯದಿಂದ ಪ್ರಭಾವಿತರಾದವರು ಆಗಿದ್ದರು. [30]ಯೇಸುವಿನ ಕುಟುಂಬದ ಕಥೆಯು ಲೂಕ 8ನ್ನು ಒಳಗೊಂಡಿದ್ದು, ಕೇಳುವುದು ಮತ್ತು ವಿಧೇಯರಾಗುವ ಅವಶ್ಯಕತೆಯನ್ನು ದೃಷ್ಟಾಂತಿಕರಿಸುವುದಾಗಿದೆ. ಮತ್ತಾಯ ಮತ್ತು ಮಾರ್ಕರ ಕೂಡ ಕಥೆಯನ್ನು ಹೊಂದಿದ ಆ ಸ್ಥಳದಲ್ಲಿಯೇ ಲೂಕನು ಕ್ರಿಸ್ತನ ತಾಯಿ "ಧನ್ಯಳು" ಎಂದು ಒಬ್ಬ ಸ್ತ್ರೀ ಹೇಳಿದ ಕಥೆಯನ್ನು ಸೇರಿಸಿದ್ದಾನೆ (ಲೂಕ 11:27, 28). ಈ ಎಲ್ಲಾ ಸರಣಿಗಳು ಮೂಲತಹವಾಗಿ ಒಂದೇ ಪಾಠವನ್ನು ಬೋಧಿಸುತ್ತಿರುವುದರಿಂದ, ನಾನು ಅವುಗಳನ್ನು ನಾನು ಒಟ್ಟಾಗಿ ಕೂಡಿಸುತ್ತಿದ್ದೇನೆ.

[31]ಯೇಸುವಿನ ಮಾತುಗಳು ಇಲ್ಲಿ ಮತ್ತು ಮತ್ತಾಯ 12:48-50ರಲ್ಲಿನ ಅನ್ಯಥಾ ಮರಿಯ ಳನ್ನು ಪೂಜಿಸುವದರ ವಿರುದ್ಧ ಬಲವಾದ ಆರೋಪ ಇಲ್ಲಿದೆ. [32]ಆತನು ಮರಣಿಸುವ ಮುನ್ನಿನನ ಕೊನೆಯ ಮಾತಿನಲ್ಲಿನ ತಾಯಿಯ ಬಗೆಗಿನ ಕಾಳಜಿಯು ಈ ಅಂಶಗಳಿಂದ ಪ್ರಮಾಣಿಕರಿಸಲ್ಪಟ್ಟಿದೆ (ಯೋಹಾನ 19:26, 27). [33]ನಂತರದ ಹಸ್ತಪ್ರತಿಯಲ್ಲಿ "ಮತ್ತು ಆತನ ಸಹೋದರಿಯರು" ಎಂದು ಸೇರಿಸ ಲ್ಪಟ್ಟಿದೆ, ಆದರೆ ಹಳೆಯ ಹಸ್ತಪ್ರತಿಯಲ್ಲಿ ಈ ಸೇರಿಸುವಿಕೆಯ ಇಲ್ಲ. ಮತ್ತಾಯ 13:55, 56ರ ಪ್ರಕಾರ ಯೇಸುವಿಗೆ ಕನಿಷ್ಟ ಪಕ್ಷ ನಾಲ್ಕು ಜನ ಸಹೋದರರು ಮತ್ತು ಇಬ್ಬರು ಸಹೋದರಿಯರು ಇದ್ದರು. ಆತನ ಭೌತಿಕ ಕುಟುಂಬವು ಸಹ ಮುಂದಿನ ಪಾಠದಲ್ಲಿ ವಿವರವಾಗಿ ಚರ್ಚಿಸಲ್ಪಟ್ಟಿದೆ. [34]ಈ ಪರಿಚ್ಛೇದ ವನ್ನು ಮಾರ್ಕ 2:2, 4ರ ಜೊತೆ ಹೋಲಿಸಿ. [35]ಇದರ ಮೇಲಿನ ಹೆಚ್ಚಿನ ಚರ್ಚೆಗಾಗಿ, ಈ ಮುಂದಿನ ಪ್ರಸಂಗವು ಹೊಂದಿರುವುದನ್ನು ನೋಡಿರಿ. [36]ಈ ಚರ್ಚೆಯು ಈ ಪುಸ್ತಕದ ನಂತರದಲ್ಲಿ ಸಿಕ್ಕುವ "ನಮ್ಮ ಎರಡು ಕುಟುಂಬಗಳು" ಎಂದು ವಿಸ್ತರಿಸಲ್ಪಟ್ಟಿದೆ. [37]ಈ ಪಾಠದ ಪೀಠಿಕೆಯನ್ನು ಪುನರಾ ವಲೋಕಿಸಿ. [38]ಇವುಗಳಲ್ಲಿ ಕೆಲವನ್ನು ನೀವು ಪುನರಾವಲೋಚಿಸ ಬಯಸಬಹುದು (ಮತ್ತಾಯ 12:33-37 ಇವುಗಳಂತೆ ಸೂಚಿಸಲ್ಪಟ್ಟಂತ ಇಲ್ಲ).